ಎರಡು ವರ್ಷಗಳಿಂದ ಹೇಳುತ್ತಾ ಬಂದಿದ್ದಾರೆ. ಇದೀಗ ತಾಲ್ಲೂಕಿನಲ್ಲಿರುವ ಈ ಆಸ್ಪತ್ರೆ ಸರಕಾರದ ಆರೋಗ್ಯ ಇಲಾಖೆಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದೆಯೋ ಅಥವಾ ಜಿಲ್ಲಾ ಪರಿಷತ್ತಿನಲ್ಲಿ ಕೇಳಿದಾಗ ಹಣವಿಲ್ಲವೆಂದು ಮಾತ್ರ ತಿಳಿದು ಬಂದಿದೆ. ಸರಕಾರ ಹಣವಿಲ್ಲದ ಕಲಬುರ್ಗಿ ಜಿಲ್ಲಾ ಪರಿಷತ್ತಿಗೆ ಈ ದಾಖಲಾಗಿ ವಿಶೇಷವಾಗಿ ಹಣ ಒದಗಿಸಿ ಅವಶ್ಯಕ ಸೇವೆಯಲ್ಲೊಂದಾದ ಆರೋಗ್ಯ ಸೌಲಭ್ಯವನ್ನು ಚಿಂಚೊಳ್ಳಿ ತಾಲ್ಲೂಕಿನ ಜನರಿಗೆ ಒದಗಿಸಕೊಡಬೇಕಾಗಿ ಕರ್ನಾಟಕ ಘನ ಸರ್ಕಾರಕ್ಕೆ ಒತ್ತಾಯಿಸುತ್ತೇನೆ ಹಾಗೂ ಕುಂಟು ನೆಪ ಹೇಳಿ ನುಣುಚಿಕೊಳ್ಳಕೂಡದೆಂದು ವಿನಂತಿಸುತ್ತೇನೆ.

ಶ್ರೀ ಎಂ. ರಘುಪತಿ.—ಹೆಲ್ತ್ ಮಿನಿಸ್ಟರ್ ಕೆಳಮನೆಯಲ್ಲಿದ್ದಾರೆ. ಉತ್ತರ ಒದಗಿಸಿಕೊಡುತ್ತೇನೆ.

(೧೬) ಮಂಡಲ ಪಂಚಾಯಿತಿ ಸರಹದ್ದಿನಲ್ಲಿ ಬರುವ ಪಂಪುಸೆಟ್ಟು ಹಾಗೂ ದಾರಿದೀಪಗಳ ಬಿಲ್ಲನ್ನು ಸರ್ಕಾರ ಭರಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಮಂಡಲ ಪಂಚಾಯಿತಿ ಹದ್ದಿನಲ್ಲಿಯ ಕುಡಿಯುವ ನೀರಿನ ಪಂಪ್ ಸೆಟ್ ಹಾಗೂ ದಾರಿದೀಪಗಳು ಬಿಲ್ಲನ್ನು ಸರಕಾರ ಆಕರಣೆ ಮಾಡಿರುವುದು ಪ್ರತಿಭಟಿಸುತ್ತೇನೆ. ಮಂಡಲ ಪಂಚಾಯತಿಗಳಿಗೆ ಆರ್ಥಿಕ ಮುಗ್ಗಟ್ಟಿಗೆ ಒಳಪಟ್ಟಿರುತ್ತವೆ. ಆದಕಾರಣ ಇದನ್ನು ಕೂಡಲೇ ನಿಲ್ಲಿಸುವಂತೆ ಒತ್ತಾಯಿಸುತ್ತೇನೆ. ಹಾಗೂ ಸರಕಾರದ ಹೇಳಿಕೆಯನ್ನು ಅಪೇಕ್ಷಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ರಘುಪತಿಯವರೇ ಉತ್ತರ ಹೇಳಿ.

ಶ್ರೀ ಎಂ. ರಘುಪತಿ.—ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಉತ್ತರ ಒದಗಿಸುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಶ್ರೀ ರಘುಪತಿಯವರೇ, ಎಲ್ಲದಕ್ಕೂ ಉತ್ತರ ಹೇಳುತ್ತಿದ್ದಾರೆ

ಶ್ರೀ ಬಿ. ಎ. ಉಮರಬ್ಬ.—ಇದೇ ರೀತಿ ಎಲ್ಲಾ ಪ್ರಶ್ನೆಗೂ ಉತ್ತರ ಒದಗಿಸಿಕೊಡುತ್ತೇನೆ, ನಾಳೆ ಕೊಡಿಸುತ್ತೇನೆ ಎಂದರೆ ನಾವು ಕುಳಿತುಕೊಂಡು ಏನೂ ಪ್ರಯೋಜನವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ರಘುಪತಿಯವರು ಹೋಮ್ ಮಿನಿಸ್ಟರ್, ಹೆಲ್ತ್ ಮಿನಿಸ್ಟರ್, ಲೋಕೋಪಯೋಗಿ ಇಲಾಖೆಯ ಸಚಿವರು, ರೂರಲ್ ಡೆವಲ್‌ಮೆಂಟ್ ಸಚಿವರು, ಎಲೆಕ್ಟ್ರಿಸಿಟಿ ಮಿನಿಸ್ಟರ್ ಎಲ್ಲಾ ಕಂಪ್ಲೀಟ್ ಹೆ ಳಿಬಿಟ್ಟರೆ ನಾವು ಯಾರನ್ನು ಪ್ರಶ್ನೆ ಮಾಡುವುದು, ಅವರಿಗೆ ಪೋರ್ಟ್‌ಪೊಲಿಯೋ ಜಾಸ್ತಿ ಆಯಿತು. ಎಲ್ಲದಕ್ಕೂ ಸ್ಯಾಕ್ ಉತ್ತರ ಕೊಡುತ್ತೀರಲ್ಲಾ, ಆಯಿತು, ಕೊಡಿಸುತ್ತೇನೆ. ಎಂದು ಹೇಳುತ್ತೀರಲ್ಲಾ. ಶೂನ್ಯವೇಳೆ ಎಂಬುದು

೨-೩೦ ಪಿ. ಎಂ.

ಇರುವುದು ಬೇಡ ಎಂಬ ಕಾರಣದಿಂದ ಈಗ ಈ ನಿಯಮ ೩೩ಳಿನ್ನು ಜಾರಿಗೆ ತರಲಾಯಿತು. ಆದರೆ ನಾವು ಕೊಟ್ಟ ನೋಟೀಸ್‌ಗಳಿಗೆ ಉತ್ತರವೇ ಬರುತ್ತಿಲ್ಲ. ಒಂದೊಂದು ಸಲ ಉತ್ತರ ಒಂದಿದ್ದರೂ ಸಹ ಅದನ್ನು ಇಲ್ಲಿ ಹೇಳಲು ಸಂಬಂಧಪಟ್ಟ ಮಂತ್ರಿಗಳು ಇರುವುದಿಲ್ಲ. ಈ ರೀತಿ ಆದರೆ ಇದನ್ನು ಜಾರಿಗೆ ತರುವುದರ ಆಗತ್ಯವಾದರೂ ಏನಿತ್ತು ?

ಶ್ರೀ ಎಂ. ರಘುಪತಿ.—ಮಾನ್ಯ ಕೃಷ್ಣನ್ ಅವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಅವರ ಅಭಿಪ್ರಾಯದ ಬಗ್ಗೆ ನನ್ನ ಭಿನ್ನಾಭಿಪ್ರಾಯ ಏನೂ ಇಲ್ಲ. ನಾಳೆಯಿಂದ ಕಟ್ಟುನಿಟ್ಟಾಗಿ ಎಲ್ಲಾ ಮಂತ್ರಿಗಳು ಸದನದಲ್ಲಿ ಹಾಜರಿದ್ದು ಉತ್ತರ ಕೊಡುವಂತಹ ಒಂದು ಏರ್ಪಾಡು ಮಾಡಲಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ,—ನಾಳೆಯಿಂದ ಬೇಡ, ಶನಿವಾರ ಮತ್ತು ಭಾನುವಾರ ಇದನ್ನು ಇಟ್ಟುಕೊಳ್ಳಿ.

ಶ್ರೀ ಎಂ. ರಘುಪತಿ.—ಮಾನ್ಯ ಬಂಗಾರಪ್ಪನವರು ಆ ದಿನಗಳಲ್ಲಿ ಸಭೆಗೆ ಬರುವುದಾದರೆ ಇದನ್ನು ಇಟ್ಟುಕೊಳ್ಳೋಣ.